**ಮೆ: ಚಿದಾನಂದ ಬಸಪ್ರಭು ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, (ಚಿ.ಬ.ಕೊ.ಸ.ಸ.ಕಾ.ನಿ) ಇವರು ನನದಿ ಮತ್ತು ಕೇರೂರ ಗ್ರಾಮ, ಚಿಕ್ಕೋಡಿ ತಾಲ್ಲೂಕ, ಬೆಳಗಾವಿ ಜಿಲ್ಲೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ, 30 ಕೆಎಲ್‌ಪಿಡಿ ಸಾಮರ್ಥ್ಯದ ಕಾಕಂಬಿ ಆಧಾರಿತ ಡಿಸ್ಟಿಲರಿಯನ್ನು 110 ಕೆಎಲ್‌ಪಿಡಿ ಸಾಮರ್ಥ್ಯಕ್ಕೆ ವಿಸ್ತರಿಸಲು ಉದ್ದೇಶಿಸಿರುತ್ತಾರೆ. ಇದರ ಪ್ರಯುಕ್ತ ಉದ್ದೇಶಿತ ಯೋಜನೆಯ ವಿಸ್ತರಣೆಯ ಹಿನ್ನೆಲೆಯಲ್ಲಿ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು.**

**ದಿನಾಂಕ** : 09-07-2020.

**ವೇಳೆ** : ಬೆಳಿಗ್ಗೆ 11:00 ಘಂಟೆ,

**ಸ್ಥಳ** : ಮೆ: ಚಿದಾನಂದ ಬಸಪ್ರಭು ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, (ಚಿ.ಬ.ಕೊ.ಸ.ಸ.ಕಾ.ನಿ) ನನದಿ ಮತ್ತು ಕೇರೂರ ಗ್ರಾಮ, ಚಿಕ್ಕೋಡಿ ತಾಲ್ಲೂಕ, ಬೆಳಗಾವಿ ಜಿಲ್ಲೆ.

ಮೆ: ಶ್ರೀ. ಚಿದಾನಂದ ಬಸಪ್ರಭು ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, (ಚಿ.ಬ.ಕೊ.ಸ.ಸ.ಕಾ.ನಿ) ಇವರು ನನದಿ ಮತ್ತು ಕೇರೂರ ಗ್ರಾಮ ಚಿಕ್ಕೋಡಿ ತಾಲ್ಲೂಕ, ಬೆಳಗಾವಿ ಜಿಲ್ಲೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ, 30 ಕೆಎಲ್‌ಪಿಡಿ ಸಾಮರ್ಥ್ಯದ ಕಾಕಂಬಿ ಆಧಾರಿತ ಡಿಸ್ಟಿಲರಿಯನ್ನು 110 ಕೆಎಲ್‌ಪಿಡಿ ಸಾಮರ್ಥ್ಯಕ್ಕೆ ವಿಸ್ತರಿಸಲು ಉದ್ದೇಶಿಸಿರುತ್ತಾರೆ. ಈ ಬಗ್ಗೆ ದಿನಾಂಕ: 09-07-2020 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | | |
|---|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : | ಮೆ: ಚಿದಾನಂದ ಬಸಪ್ರಭು ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, (ಚಿ.ಬ.ಕೊ.ಸ.ಸ.ಕಾ.ನಿ) ನನದಿ ಮತ್ತು ಕೇರೂರ ಗ್ರಾಮ ಚಿಕ್ಕೋಡಿ ತಾಲ್ಲೂಕ, ಬೆಳಗಾವಿ ಜಿಲ್ಲೆ. |
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | : | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | : | ಅನುಬಂಧ-4 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು | : | ಅನುಬಂಧ-5 |

ಕೇಂದ್ರ ಅರಣ್ಯ, ಪರಿಸರ ಹಾಗೂ ಆಘಾತ ಅಧ್ಯಯನ ಅಧಿಸೂಚನೆ, ಇವರು ದಿನಾಂಕ 14-09-2006 (ತಿದ್ದುಪಡಿ ದಿನಾಂಕ 01-12-2009) ರಂದು ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಯು ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಹಾಗೂ ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ಅರಣ್ಯ ಮತ್ತು ಪರಿಸರ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರಕಾರ (ಆಘಾತ ಅಧ್ಯಯನ ವಿಭಾಗ) ನವ ದೆಹಲಿ, ಇವರು ಸದರಿ ಯೋಜನೆಯ **Standards Terms of Reference** ಅನ್ನು ದಿನಾಂಕ 18-12-2019 ರಂದು ಅಂತಿಮಗೊಳಿಸಿ ಅದರಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಾರ್ವಜನಿಕ ಪರಿಸರ ಸಭೆಯನ್ನು ನಡೆಸಲು ಕೋರುವಂತೆ **ಮೆ: ಚಿದಾನಂದ ಬಸಪ್ರಭು ಕೊರೆ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, (ಚಿ.ಬ.ಕೊ.ಸ.ಸ.ಕಾ.ನಿ)** ಇವರಿಗೆ ತಿಳಿಸಿರುತ್ತಾರೆ. ಸದರಿ ಯೋಜನೆಯ ಅದಿಭೋಗದಾರರು ಪತ್ರದ ದಿನಾಂಕ: 25-02-

2020ರ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಕೋರಿರುತ್ತಾರೆ. ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ವಿಸ್ತರಣಾ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದಲ್ಲಿ ಪತ್ರಿಕೆಗಳಾದ **"ವಿಜಯ ಕರ್ನಾಟಕ"** (ಕನ್ನಡ) ,**"ಡೆಕ್ಕನ್ ಹೆರಾಲ್ಡ್"** (ಆಂಗ್ಲ ಭಾಷೆ)ಯಲ್ಲಿ ದಿನಾಂಕ: 09-06-2020 ರಂದು ಹಾಗೂ ಸ್ಥಳೀಯ ಮಟ್ಟದಲ್ಲಿ **"ಕನ್ನಡಮ್ಮ"** ದಿನ ಪತ್ರಿಕೆಯಲ್ಲಿ ದಿನಾಂಕ: 10-06-2020 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲೂ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 09-07-2020 ರಂದು ಬೆಳಿಗ್ಗೆ 11:00 ಘಂಟೆಗೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಜಗದೀಶ. ಐ. ಎಚ್. ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-2 (ಚಿಕ್ಕೋಡಿ) ಇವರು **ಶ್ರೀ ಅಶೋಕ ದುಡಗುಂಟಿ,** ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, **ಶ್ರೀ. ವಿಜಯಕುಮಾರ ಕಡಕಬಾವಿ,** ವಲಯ ಹಿರಿಯ ಪರಿಸರ ಅಧಿಕಾರಿಗಳು, ವಿಭಾಗೀಯ ಕಛೇರಿ, ಧಾರವಾಡ ಮತ್ತು ಚಿಕ್ಕೋಡಿ ತಹಶೀಹಲ್ದಾರ ರವರಿಗೂ ಸಹ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಮತ್ತು ಪರಿಸರ ಪ್ರೇಮಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ (ಏಳು ಕಛೇರಿಗಳು) ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ಸಲಹೆಗಾರರಾದ ಮೆ: ಇಕ್ವಿನಾಕ್ಸ್ ಎನ್ವಿರಾನ್ಮೆಂಟ್ (ಐ) ಪ್ರೈವೆಟ್ ಲಿಮಿಟೆಡ್, ಕೊಲ್ಲಾಪುರನವರು ಯೋಜನೆಯ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು **ಅನುಬಂಧ-5** ರಲ್ಲಿ ಲಗತ್ತಿಸಲಾಗಿದೆ.

ಸಾರ್ವಜನಿಕರು ವ್ಯಕ್ತ ಪಡಿಸಿದ ಅನಿಸಿಕೆಗಳು ಈ ಕೆಳಗಿನಂತಿವೆ.

1. **ಶ್ರೀ ಸಂತೋಷ ಜೋಶಿ, ಯಡೂರ ಗ್ರಾಮ:**
   ಇದು ಒಂದು ರೈತರ ಬಗ್ಗೆ ಒಳ್ಳೆ ಸ್ಕೀಮ್ ಅನಿಸುತ್ತಿದೆ. ಇದರೊಳಗೆ ಮುಖ್ಯವಾಗಿ ತಯಾರಾಗುವ ಬೂದಿಯಲ್ಲಿ ಪೊಟ್ಯಾಶನ್ನು ಹೊಂದಿರುತ್ತದೆ. ಇದನ್ನು ಉಪಯೋಗಿಸಿ ರೈತರಿಗೆ ಗೊಬ್ಬರ ಸಪ್ಲೈ ಮಾಡಲಿಕ್ಕೆ ಸಾಧ್ಯವಿದೆ. ಈ ತರಹದ ಗೊಬ್ಬರವನ್ನು ರೈತರಿಗೆ ನೀಡಲು ಅನುಕೂಲ ಮಾಡುವಂತೆ ವಿನಂತಿಸಿದರು.